RNU AIR DHARWAD

JANUARY 22, 2026

# AKASHAVANI - DHARWAD

## PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು ಬೆಳಗ್ಗೆ 11 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡ ಸದನದಲ್ಲಿ, ಸರ್ವರನ್ನೂ ಕನ್ನಡದಲ್ಲಿ ಸ್ವಾಗತಿಸಿ, ಶುಭಾಶಯ ಕೋರಿ, ಆರ್ಥಿಕ ಸ್ಥಿತಿಗತಿಗಳನ್ನು ನಿಭಾಯಿಸಲು, ತಮ್ಮ ಸರ್ಕಾರ ಸರ್ವರೀತಿ ಸನ್ನದ್ಧವಾಗಿದೆ ಎಂದು ತಿಳಿಸಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ, ವಿಧಾನ ಮಂಡಲದ ಜಂಟಿ ಅಧಿವೇಶನದ ತಮ್ಮ ಭಾಷಣವನ್ನು ಪೂರ್ಣಗೊಳಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸೌಧದ ಎದುರು, ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿ, ರಾಜ್ಯಪಾಲರು ಸಿದ್ಧ ಪಡಿಸಿದ ಭಾಷಣವನ್ನು ಓದುವಂತಿಲ್ಲ; ರಾಜ್ಯ ಸಚಿವ ಸಂಪುಟ ಸಿದ್ಧ ಪಡಿಸಿದ ಭಾಷಣವನ್ನು ಮಾತ್ರ ಓದಬೇಕು. ಆದರೆ, ಇಂದು ಜಂಟಿ ಅಧಿವೇಶನ ಮತ್ತು ವಿಶೇಷ ಅಧಿವೇಶನ ಸಹ ಕರೆಯಲಾಗಿದ್ದು, ಮಹಾತ್ಮ ಗಾಂಧಿ ನರೇಗಾ ಯೋಜನೆ ರದ್ದು ಪಡಿಸಿ, ವಿಕಸಿತ ಭಾರತ ಜಿ ರಾಮ್ ಜಿ ಕಾಯ್ದೆಯನ್ನು, ಕೇಂದ್ರ ಜಾರಿಗೊಳಿಸಿದೆ. ಈ ನಡೆಗೆ ತಮ್ಮ ಸರ್ಕಾರದ ತೀವ್ರ ವಿರೋಧವಿದೆ. ಮಹಾತ್ಮ ಗಾಂಧಿ ಅವರ ಹೆಸರನ್ನು ತೆಗೆದು, 20 ವರ್ಷಗಳ ಹಿಂದೆ, ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರು, ಸಣ್ಣ ರೈತರು, ಮಹಿಳೆಯರು, ಬಡವರು, ಕಾರ್ಮಿಕರು ಹಾಗೂ ದಲಿತರ ಆರ್ಥಿಕ ಅಭ್ಯುದಯಕ್ಕಾಗಿ ಜಾರಿಗೆ ತಂದ, ಮಹತ್ವದ ಯೋಜನೆ ರದ್ದು ಪಡಿಸಿದ್ದು, ಸರಿ ಅಲ್ಲ ಎಂದು, ತಿಳಿಸಿದರು.

<><><>

ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ, 10 ದಿನಗಳ ಕಾಲ, 31ನೇ ತಾರೀಖಿನ ವರೆಗೆ, ನಡೆಯಲಿದೆ. 2026ರ ಮೊದಲ ಹಾಗೂ ರಾಜ್ಯ ವಿಧಾನಮಂಡಲದ, ನೂರ ಐವತ್ತೆಂಟನೇ ಅಧಿವೇಶನವಾಗಿದೆ.

<><><>

ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ ವಿಷಯವಾಗಿ, 2004 ರಲ್ಲಿ, ಮಹಾರಾಷ್ಟ್ರ ಸರ್ಕಾರ, ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಕೇಂದ್ರ ಸರ್ಕಾರವನ್ನು ಮೊದಲ ಹಾಗೂ ಕರ್ನಾಟಕವನ್ನು ಎರಡನೇ ಪ್ರತಿವಾದಿಯಾಗಿ ಹೆಸರಿಸಿದೆ. ನ್ಯಾಯಮೂರ್ತಿ ಸಂಜಯಕುಮಾರ ಹಾಗೂ ನ್ಯಾಯಮೂರ್ತಿ ಅಲೋಕ ಆರಾಧ್ಯ ಅವರಿದ್ದ ದ್ವಿಸದಸ್ಯ ಪೀಠ, ಕಳೆದ ಅಕ್ಟೋಬರ್ ನಲ್ಲಿ ನಿಗದಿಯಾಗಿದ್ದ, ನಿನ್ನೆಯ ದಿನಾಂಕಕ್ಕೆ ವಿಚಾರಣೆ ನಡೆಸಲಿಲ್ಲ. ಮುಂದಿನ ದಿನಾಂಕ ಇನ್ನಷ್ಟೇ ಪ್ರಕಟಿಸಬೇಕಿದೆ. ಬೆಳಗಾವಿ ಸೇರಿ, 865 ಹಳ್ಳಿಗಳು ತನ್ನ ವ್ಯಾಪ್ತಿಗೆ ಸೇರಿವೆ ಎಂದು, ಮಹಾರಾಷ್ಟ್ರ ವಾದ ಮಂಡಿಸಿದೆ. ಕರ್ನಾಟಕ ಸರ್ಕಾರ, ಈ ವಿಷಯದಲ್ಲಿ ಮಹಾಜನ ವರದಿಯೇ ಅಂತಿಮ  ಎಂದು, ಸ್ಪಷ್ಟ ಪಡಿಸಿದೆ.

<><><>

ಬಾಗಲಕೋಟೆ ಜಿಲ್ಲೆ, ಬಾದಾಮಿಯ ಚಾಲುಕ್ಯರ ವಾಸ್ತುಶಿಲ್ಪಗಳು, ಯೂನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡು, ಮನ್ನಣೆ ಪಡೆದ, ಐಹೊಳೆಯಲ್ಲಿ, ಚಾಲುಕ್ಯ ಉತ್ಸವದ ಮೂರನೇ ದಿನವಾದ ನಿನ್ನೆ ಸಂಜೆ, ವೈಭವದಿಂದ ಸಮಾರೋಪಗೊಂಡಿತು. ಐಹೊಳೆಯಯ, ದುರ್ಗಾ ದೇವಾಲಯದ ಸಮುಚ್ಛಯದ, ಜಯಸಿಂಹ ಕಲಾ ವೇದಿಕೆಯಲ್ಲಿ, 30ಕ್ಕೂ ಹೆಚ್ಚು ತಂಡಗಳು, ಸಮಾರೋಪದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿ, ಮನಸೂರೆಗೊಂಡವು.

<><><>

ಸಮಾರೋಪ ಸಮಾರಂಭವನ್ನು ಉದ್ಘಾಟಿಸಿದ, ಬಾದಾಮಿ ಶಾಸಕ, ಭೀಮಸೇನ ಚಿಮ್ಮನಕಟ್ಟಿ, ನೆರೆದಿದ್ದ ಸಹಸ್ರಾರು ಸಭಿಕರೊಂದಿಗೆ, ತಮ್ಮ ಅನಿಸಿಕೆ ಹಂಚಿಕೊಂಡರು.

<><><>

ಶಾಸಕ ಭೀಮಸೇನ ಚಿಮ್ಮನಕಟ್ಟಿ ಧ್ವನಿ 35 ಸೆಕೆಂದುಗಳು

<><><>

ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಕೈಗೊಳ್ಳಲಾದ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿಯನ್ನು, ಈ ತಿಂಗಳಾಂತ್ಯಕ್ಕೆ ಅಥವಾ ಫೆಬ್ರುವರಿ 10ನೇ ತಾರೀಖಿನೊಳಗೆ, ಮುಖ್ಯಮಂತ್ರಿಯವರಿಗೆ ಸಲ್ಲಿಸುವುದಾಗಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ಖಾತೆ ಸಚಿವ, ಶಿವರಾಜ ತಂಗಡಗಿ ತಿಳಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರಿನ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ, ಅಂಬಿಗರ ಚೌಡಯ್ಯ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು, ಮಾತನಾಡಿದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಯುವ ಸದಸ್ಯ ಉದ್ಯಮಿಗಳಿಗಾಗಿ, ದೇಶಪಾಂಡೆ ಫೌಂಡೇಷನ್ ದಲ್ಲಿ, ಸ್ಟಾರ್ಟ್ ಅಪ್, ನೂತನ ಉದ್ಯಮ ಆರಂಭಿಸುವ ಅವಕಾಶಗಳ ಕುರಿತು, ವಿಶೇಷ ಕಾರ್ಯಾಗಾರ ಜರುಗಿತು. ದೇಶಪಾಂಡೆ ಫೌಂಡೇಷನ್ ಸಂಸ್ಥಾಪಕ, ಗುರುರಾಜ ದೇಶಪಾಂಡೆ, ನವೋದ್ಯಮ, ಸ್ಟಾರ್ಟ್ ಅಪ್ ಇಂಡಿಯಾ ಹಾಗೂ ಹೂಡಿಕೆದಾರ ವೇದಿಕೆಗಳ ಬಗ್ಗೆ, ಆಸಕ್ತ ನವೋದ್ಯಮಿಗಳಿಗೆ, ಮಾರ್ಗದರ್ಶನ ಮಾಡಿದರು.

<><><>

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ, ಎಂ.ಎಸ್.ಎಂ.ಇ.ಗಳು, ಗುಣಮಟ್ಟ ಕಾಯ್ದುಕೊಂಡು, ಸಕಾಲಿಕವಾಗಿ ಉತ್ಪನ್ನ ಅಥವಾ ಸೇವೆಗಳನ್ನು ತಲುಪಿಸಲು, ಕೃತಕ ಬುದ್ಧಿಮತ್ತೆ ಹಾಗೂ ಡ್ರೋಣ್‌ದಂತಹ, ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳುವುದು ಅವಶ್ಯ ಎಂದು, ಧಾರವಾಡ ಜಿಲ್ಲೆ, ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ, ಸತ್ಯನಾರಾಯಣ, ಹೇಳಿದ್ದಾರೆ. ಉತ್ತರ ಕರ್ನಾಟಕದ, ಸಣ್ಣ ಕೈಗಾರಿಕೆಗಳ ಸಂಘ, ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ, ಮಾರಾಟಗಾರರ ಅಭ್ಯುದಯ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ಎಂ.ಎಸ್ಎಂ.ಇ. ಗಳಿಗೆ, ಮಾರುಕಟ್ಟೆ ಸಂಪರ್ಕ ಕಲ್ಪಿಸಲು, ಸಾರ್ವಜನಿಕ ವಲಯದ, ಪ್ರತಿಷ್ಠಿತ ಐದು ಉದ್ಯಮಗಳನ್ನು ಆಹ್ವಾನಿಸಿ, ವೆಂಡರ್ ಡೆವಲಪ್‌ಮೆಂಟ್ ಪ್ರೋಗ್ರಾಂ ಆಯೋಜಿಸಲಾಗಿದೆ ಎಂದರು.

<><><>

ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ, ಹುಬ್ಬಳ್ಳಿಯ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಚೇರಿಗೆ ಆಗಮಿಸಿ, ಸಂಸ್ಥೆಯ ವ್ಯಾಪ್ತಿಯ ಅಪಘಾತ ಸ್ಥಳ, ಡಾರ್ಕ್ಸ್ ಆಕ್ಸಿಡೆಂಟ್ ಸ್ಪಾಟ್‌ಗಳ ಕುರಿತು, ಚರ್ಚಿಸಿದರು. ಸಂಸ್ಥೆ ಉಪಾಧ್ಯಕ್ಷ ಸುನೀಲ ಹನುಮನ್ನನವರ, ವ್ಯವಸ್ಥಾಪಕ ನಿರ್ದೇಶಕಿ ಎಂ. ಪ್ರಿಯಾಂಗಾ, ಸಚಿವರಿಗೆ ಮಾಹಿತಿ ನೀಡಿದರು.

<><><>

ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿಯಲ್ಲಿ ಉತ್ಖನನ ಕಾರ್ಯ ಮುಂದುವರೆದಿದೆ. ನಿನ್ನೆ, 6ನೇ ದಿನದ ಉತ್ಖನನದ ಅಂತ್ಯದ ವೇಳೆ, ಮೂಳೆ ತುಂಡು, ನಾಗರಕಲ್ಲು, ಒಡೆದ ಮಣ್ಣಿನ ಮಡಕೆ, ಟೆರ್ರಾಕೋಟಾ ವೃತ್ತಾಕಾರದ ಬಿಲ್ಲೆ, ಕೆಂಪು ಮಣಿಗಳು ಹಾಗೂ 6 ಮೂಳೆಯ ಚಿಕ್ಕ ತುಂಡುಗಳು ಪತ್ತೆಯಾಗಿವೆ. 2 ಮೀಟರ್ ಆಳದಲ್ಲಿ, ಉತ್ಖನನ ಜಾಗೆಯ ಬ್ಲಾಕ್ 1 ರಲ್ಲಿ ಪತ್ತೆಯಾದ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ, ವರದಿ ಪಡೆಯುವುದಾಗಿ, ಪುರಾತತ್ವ ಇಲಾಖೆ ಅಧಿಕಾರಿಗಳು ತಿಳಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.